ಈ ದಿನ ದಿನಾಂಕಃ 24.06.2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲು ಪ್ರತಿ ವಾದಿ ನಂ**. 1, 2(a)** ರಿಂದ **(d)** ಪರ ಶ್ರೀ ವೈ**.**ಎಂ**.**ಆರ್**.** ವಕೀಲರಿಂದಃ</u>

1.ದಿನಾಂಕ 05-09-2023 ರಂದು ಮಾಡಿದ ಪಾಟೀ ಸವಾಲಿನ ವಿಚಾರಗಳು ನನಗೆ ಗೊತ್ತು. ನಂತರ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿರಬಹುದು. ತದನಂತರ ನಿಪಿ 12 ರಿಂದ 31 ರಂತಿರುವ ದಾಖಲೆಗಳನ್ನು ಪುರಸಭೆ ಇವರಿಂದ ಪಡೆದಿರುತ್ತೇನೆ. ಸದರಿ ದಾಖಲೆಗಳು ಪುರಸಭೆಯವರ ದಾಖಲೆಗಳು ತುಮ್ ಕೋಸ್ ದೊಂದಿಗೆ ಯಾವುದೇ ವ್ಯವಹರಣೆಗಳಿಲ್ಲ. ಸದರಿ ವ್ಯವಹರಣೆಯಲ್ಲಿ ತುಮ್ ಕೋಸ್ ಸಂಸ್ದೆಯ ಆಸ್ತಿಯ ಕುರಿತು ಉಲ್ಲೇಖ ಮಾಡಿರುವುದಿಲ್ಲ.

2. ನಿಪಿ 12 ರಿಂದ 31 ರಲ್ಲಿರುವ ಪತ್ರ ವ್ಯವಹರಣೆಗಳು 10-01-2024 ರ ನಂತರ ಮಾಡಿದವಿರುತ್ತವೆ. ದಿಃ 05-09-2023 ರ ಪಾಟೀ ಸವಾಲುನ ನಂತರ ತುಮ್ ಕೋಸ್ ಸಂಸ್ಥೆಯವರು ಮತ್ತೆ ನಮ್ಮ ಆಸ್ತಿಯಲ್ಲಿ ಒತ್ತುವರಿ ಮಾಡಿರುತ್ತಾರೆ. ದಿನಾಂಕ 05-09-2023 ರ ನಂತರ ಕಾಂಪೌಂಡ್ ಕಟ್ಟಿ ನಮ್ಮ ನಿವೇಶನದ ಹಿಂದುಗಡೆ ಇದ್ದ ರಸ್ತೆಯನ್ನು 1 ನೇ ಪ್ರತಿವಾದಿ ಹಾಳುಮಾಡಿರುತ್ತಾರೆ. ನಮ್ಮ ನಿವೇಶನದ ದಕ್ಷಿಣ ದಿಕ್ಕಿನ ಪಶ್ಚಿಮ ಭಾಗದಲ್ಲಿ ಒತ್ತುವರಿ ಮಾಡಿರುತ್ತಾರೆ. ಆ ರೀತಿ ಒತ್ತುವರಿ ಮಾಡಿದ ದಿನಾಂಕ 05-04-2023. ಆ ಕಾಲಕ್ಕೆ 2 ಅಡಿ ಪೂರ್ವ-ಪಶ್ಚಿಮಕ್ಕೆ, ಉತ್ತರ -ದಕ್ಷಿಣ 20 ಅಡಿ ಒತ್ತುವರಿ ಮಾಡಿರುತ್ತಾರೆ. ಆ ಒತ್ತುವರಿಯನ್ನು ತುಮ್ ಕೋಸ್ ಎಂ.ಡಿ.ಯವರು ಮಾಡಿರುತ್ತಾರೆ. ಅವರ ಜೊತೆ 8 ರಿಂದ 10 ಜನ ಮಧ್ಯಾಹ್ನದ ವೇಳೆಗೆ ಆ ಕೃತ್ಯ ಮಾಡಿರುತ್ತಾರೆ. ಆ ಕುರಿತು ನಾನು ಮಾರನೆ ದಿನ ದೂರನ್ನು ತುಮ್ ಕೋಸ್ ಎಂ.ಡಿ. ರವರ ಮೇಲೆ

ಸಲ್ಲಿಸಿರುತ್ತೇನೆ. ಎಂ.ಡಿ. ರವರ ಹೆಸರನ್ನು ದೂರಿನಲ್ಲಿ ಬರೆಸಿರುವುದಿಲ್ಲ. ಸಾಕ್ಷಿ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ ಆ ದೂರಿನ ಪ್ರತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುವುಲ್ಲ.

3. ಈ ಪ್ರಕರಣಕ್ಕಾಗಿ ನಿಪಿ 12 ರಿಂದ 31 ರ ದಾಖಲೆಗಳನ್ನು ಪುರಸಭೆಯವರ ಜೊತೆ ಶಾಮೀಲಾಗಿ ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ನಿವೇಶನ 60X30 ಅಡಿಗಳ ವಿಸ್ತೀರ್ಣದಲ್ಲಿದೆ. ಪ್ರಸ್ತುತ ನನ್ನ ನಿವೇಶನ 60X30 ಅಡಿಗಳಿದ್ದು ಆದರೆ ಮಧ್ಯದಲ್ಲಿ ಚರಂಡಿ ನಿರ್ಮಾಣಮಾಡಿರುತ್ತಾರೆ. ಚರಂಡಿ ಪೂರ್ವ-ಪಶ್ಚಿಮವಾಗಿದ್ದು, ಅದರ ಉತ್ತರಕ್ಕೆ 20 ಅಡಿ ನನ್ನ ಖಾಲಿ ನಿವೇಶನವಿದ್ದು, ದಕ್ಷಿಣಕ್ಕೆ 7 ಅಡಿ ಇರುತ್ತದೆ. ಅದರ ಮಧ್ಯದಲ್ಲಿ 3 ಅಡಿ ಅಗಲದ ಚರಂಡಿ ಇರುತ್ತದೆ. ಜಮೀನು ನಿವೇಶನವಾಗಿ ಪರಿವರ್ತನೆಯಾಗುವ ಮೊದಲೇ ಚರಂಡಿ ಇತ್ತು ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 05-03-2020 ರಂದು ನಾನು ಹೇಳಿಕೆ ಕೊಟ್ಟಿದ್ದೇನೆ ಆದರೆ 8 ನೇ ಪುಟದ ಕೊನೆಯ ಸಾಲು ಮತ್ತು 9 ನೇ ಪುಟದ ಮೊದಲ ಸಾಲಿನ ವಿವರ ನನಗೆ ಮರೆತುಹೋಗಿದೆ. ನಿಪಿ 4 ರಲ್ಲಿರುವ 1 ನೇ ಪ್ರತಿವಾದಿಯ ಕಟ್ಟಡವೆಂದು ಒಪ್ಪಿಕೊಂಡಿರುತ್ತೇನೆ. ಆ ಹೇಳಿಕೆಯ ನಂತರ ನಾನು ಈ ಪ್ರಕರಣಕ್ಕಾಗಿ ಹೆಚ್ಚುವರಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ತಿದ್ದುಪಡಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ಕುರಿತು ಸ್ಥಳ ಪರಿಶೀಲನೆಗೆ ಸಿದ್ಧನಿದ್ದೇನೆ.

4. ನಿಪಿ 12 ಮಾಹಿತಿ ಹಕ್ಕಿನಡಿಯಲ್ಲಿ ಅರ್ಜಿ ಸಲ್ಲಿಸಿದ ಬಾಬತ್ ಆಗಿದೆ. ನಿಪಿ 12 ಮತ್ತು 13 ರ ಜೊತೆ ಅರ್ಜಿ ಇರುವುದಿಲ್ಲ. ನಿಪಿ 15 ರಲ್ಲಿ ಯಾವುದೇ ಆಸ್ತಿಯ ಉಲ್ಲೇಖವಿಲ್ಲ. ನಿಪಿ 23 ರಲ್ಲಿ ನಿವೇಶನ ಸಂಖ್ಯೆ 24 ರ ಕುರಿತಾಗಿದ್ದು ಅದರ ದಿಃ 01-02-2024 ಆಗಿರುತ್ತದೆ. ಅದರಲ್ಲಿ

1 ನೇ ಪ್ರತಿವಾದಿಯ ಕಟ್ಟಡದ ಕುರಿತಾಗಿ ಉಲ್ಲೇಖಿಸಿಲ್ಲ. ನನ್ನ ಹೇಳಿಕೆಯನ್ನು ಮುಚ್ಚಿಹಾಕುವ ಉದ್ದೇಶದಿಂದ ನಿಪಿ 23 ನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 26 ರಿಂದ 28 ರ ಭಾವಚಿತ್ರಗಳು ದಿನಾಂಕ 05-04-2024 ರಂದು ಪಡೆದವು ಆಗಿರುತ್ತವೆ. ನಿಪಿ 26 ರಲ್ಲಿರುವುದು ನಮ್ಮ ನಿವೇಶನದ ಪಕ್ಕದ ಜಾಗ. ಸಾಕ್ಷಿ ಮುಂದುವರೆದು ಅದು ನಮ್ಮ ನಿವೇಶನದ ಮಧ್ಯಭಾಗದ ಜಾಗವಾಗಿರುತ್ತದೆ ಎಂದು ನುಡಿಯುತ್ತಾರೆ. ಅದು ಉತ್ತರದಲ್ಲಿನ 20 ಅಡಿ ಜಾಗ ಆಗಿರುತ್ತದೆ. ನಿಪಿ 26 ರಿಂದ 28 ರಲ್ಲಿರುವ ಚಿತ್ರಣ ಜಾಗ ನಮ್ಮ ಜಾಗಕ್ಕೆ ಸಂಬಂಧಿಸಿದ್ದಲ್ಲ.

5. ನಿಡಿ 1 ರಂತೆ ವಸ್ತು ಸ್ಥಿತಿ ಮೊದಲು ಇತ್ತು ಎಂದು ನುಡಿಯುತ್ತಾರೆ. ನಿಡಿ 2 ರಿಂದ 4 ರಂತಿರುವ ಭಾವಚಿತ್ರಗಳು ವಸ್ತು ಸ್ಥಿತಿ ಮೊದಲಿತ್ತು. ನಿಡಿ 1 ರಿಂದ 4 ರಂತಿರುವ ಭಾಚಿತ್ರಗಳು ವಸ್ತು ಸ್ಥಿತಿ ಇಂದಿಗೂ ಸಹ ಇದೆ ಎಂದರೆ ಸರಿಯಲ್ಲ. ನಿಡಿ 2 ರಲ್ಲಿ ಕಾಣು ಕಾಂಪೌಂಡ್ ಇಂದಿಗೂ ಇದೆ. ಆ ಗೋಡೆಯಿಂದ ಉತ್ತರಕ್ಕೆ ನಮ್ಮ ಆಸ್ತಿ ಇದೆ. 1 ನೇ ಪ್ರತಿವಾದಿಯ ಕಾಂಪೌಂಡ್ ಗೋಡೆ ನಮ್ಮ ಆಸ್ತಿಯಲ್ಲಿದೆ ಎಂದರೆ ಸಾಕ್ಷಿ ಗೊತ್ತಾಗುವುಲ್ಲ. ಅಳತೆ ಮಾಡಿ ನೋಡಿದರೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ.

6. ಡಿಸೆಂಬರ್ ನ 3 ನೇ ವಾರದಲ್ಲಿ ನಂದೀಶ್ ಬಿನ್ ಕುಮಾರ್ ಸ್ವಾಮಿ ಎಂಬ ಇಂಜಿನಿಯರ್ ಕಡೆಯಿಂದ ಅಳತೆ ಮಾಡಿಸಿರುತ್ತೇವೆ. ಆ ಅಳತೆಯ ಕುರಿತು ವರದಿ ಇರುವುದಿಲ್ಲ. ಸದರಿ ಇಂಜಿನಿಯವರ್ ರವರ ಮಾಹಿತಿಯಂತ ತಿದ್ದುಪಡಿ ಮಾಡಿಕೊಂಡಿದ್ದೇವೆ. ಈ ವಿಚಾರವನ್ನು ತಿದ್ದುಪಡಿಯ ಅರ್ಜಿಯಲ್ಲಿ ಬರೆಯಲಾಗಿದೆ. ಇಂಜಿನಿಯರ್ ರವರ ಮಾಹಿತಿಯಂತೆ ಪೂರ್ವ -ಪಶ್ಚಿಮ 60 ಅಡಿ, ಉತ್ತರ ದಕ್ಷಿಣ 3 ಅಡಿ ಇರುತ್ತದೆ. ಸದರಿ ಚರಂಡಿಯನ್ನು ಕಲ್ಲು ಕಡಿಯನ್ನು ಹಾಕಿ ಕಟ್ಟಿಲ್ಲ. ಅದು ತನ್ನ ಪಾಡಿಗೆ ತಾನು ಹರಿಯುತ್ತದೆ. ಸದರಿ ಚರಂಡಿ ಬಸ್ ನಿಲ್ದಾಣದಿಂದ ಪಶ್ಚಿಮದಿಂದ ಪೂರ್ವಕ್ಕೆ

ಸಾಗಿ ಹಳ್ಳ ಸೇರುತ್ತದೆ ಎಂದರೆ  ನನಗೆ ಗೊತ್ತಿಲ್ಲ. ತುಮ್ ಕೋಸ್ ಕಟ್ಟಡದ ಪಶ್ಚಿಮ ಭಾಗದಿಂದ ಪ್ರಾರಂಭವಾಗುತ್ತದೆ. ಅಳತೆ ಮಾಡದೆ ಅದರ ವಿಸ್ತೀರ್ಣ ಹೇಳಲು ನನಗೆ ಆಗುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ಮುಂದುವರೆದು ಪಾಟೀ ಸವಾಲಿಗೆ ಕಾಲವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.